# ಆ ಒಂದು ಫೋಟೋ ಕಥೆ

**ಪ್ಯಾರಿಸ್‌ನ ನಾಟ್ರೆ ಡೇಮ್ ಚರ್ಚ್‌ಗೆ ಬೆಂಕಿ ಹೊತ್ತಿಕೊಳ್ಳುವ ಕೇವಲ ಒಂದು ತಾಸು ಮೊದಲ ತೆಗೆದ ಅಪ್ಪ–ಮಗಳು ಆಟವಾಡುವ ಈ ಚಿತ್ರ ಇದೀಗ ವಿಶ್ವದ ಗಮನಸೆಳೆದಿದೆ.**

■ ಗಣಪತಿ ಶರ್ಮ



ಬಹುಶಃ ತಾವು ಆಟವಾಡುತ್ತಿರುವ ಜಾಗದಲ್ಲಿ ಇನ್ನು ಕೆಲವೇ ನಿಮಿಷಗಳಲ್ಲಿ ಭೀಕರ ಅಗ್ನಿ ಅನಾಹುತ ಸಂಭವಿಸಲಿದೆ ಎಂದು ಗೊತ್ತಿದ್ದರೆ ಆ ಅಪ್ಪ–ಮಗಳು ಅಲ್ಲಿ ಅಷ್ಟೊಂದು ಖುಷಿಯಿಂದ ಸಂಭ್ರಮಿಸುವುದು ಸಾಧ್ಯವಿತ್ತೇ? ಪ್ರವಾಸಕ್ಕೆಂದು ಬಂದ ಯುವತಿ ಅವರ ಫೋಟೊ ತೆಗೆಯುತ್ತಿದ್ದಳೇ? ಅಥವಾ ಆಕೆ ತೆಗೆದ ಫೋಟೊಗೆ ಇಷ್ಟೊಂದು ಮಹತ್ವ ಬರುತ್ತಿತ್ತೇ?

ಆಗಬಾರದ್ದೇನೋ ಆಗಿ ಹೋದಾಗ ಸಹಜವಾಗಿ ಉದ್ಭವಿಸುವ ಪ್ರಶ್ನೆಗಳಿವು. ಇಂತಹ ಹಲವು ಪ್ರಶ್ನೆಗಳು, ಮಾನವ ಜೀವನದ ಸಂದಿಗ್ಧತೆ ಮತ್ತು ಅಸಹಾಯಕತೆಗೆ ಪ್ಯಾರಿಸ್‌ನ 12ನೇ ಶತಮಾನದ ಐತಿಹಾಸಿಕ ನಾಟ್ರೆ ಡೇಮ್ ಚರ್ಚ್ ಈಗ ಸಾಕ್ಷಿಯಾಗಿದೆ. ಯುನೆಸ್ಕೊದಿಂದ 'ವಿಶ್ವ ಪಾರಂಪರಿಕ ತಾಣ' ಎಂದು ಗುರುತಿಸಿಕೊಂಡಿರುವ ಈ ಚರ್ಚ್‌ನಲ್ಲಿ ಮೊನ್ನೆಯಷ್ಟೇ ಸಂಭವಿಸಿದ ಬೆಂಕಿ ಅನಾಹುತಕ್ಕೂ ಒಂದು ತಾಸು ಮುನ್ನ ಪ್ರವಾಸಿಗರೊಬ್ಬರು ತೆಗೆದ ಫೋಟೊ ಈಗ ಜಗತ್ತಿನಾದ್ಯಂತ ಸುದ್ದಿಯಾಗುತ್ತಿದೆ. ಸಾಮಾಜಿಕ ಜಾಲತಾಣಗಳಲ್ಲಿ, ಟ್ವಿಟರ್‌ನಲ್ಲಿ ವೈರಲ್ ಆಗಿದೆ.

ಆಕೆ ಅಮೆರಿಕದ ಮಿಚಿಗನ್‌ನ 23ರ ಯುವತಿ ಬ್ರೂಕ್ ವಿಂಡ್ಸರ್. ಲಕ್ಷಾಂತರ ಪ್ರವಾಸಿಗರ ನೆಚ್ಚಿನ ತಾಣವಾಗಿರುವ ನಾಟ್ರೆ ಡೇಮ್ ಚರ್ಚ್‌ಗೆ ಸ್ನೇಹಿತೆ ಜತೆ ಸೋಮವಾರ ಸಂಜೆ ಭೇಟಿ ನೀಡಿದ್ದಾಳೆ. ಸುಂದರ ದೃಶ್ಯಗಳನ್ನು ಕ್ಯಾಮೆರಾ ಕಣ್ಣಲ್ಲಿ ಸೆರೆಹಿಡಿಯುವುದು ಆಕೆಯ ಹವ್ಯಾಸ. ಸಂಜೆಯ ಸುಂದರ ಸನ್ನಿವೇಶದಲ್ಲಿ ಆ ಭವ್ಯವಾದ ಚರ್ಚ್‌ನ ಸೌಂದರ್ಯವನ್ನು ಕಣ್ತುಂಬಿಕೊಳ್ಳುತ್ತಾ ಸ್ನೇಹಿತೆಯರಿಬ್ಬರು ಮುಂದುವರಿಯುತ್ತಿದ್ದರು. ಪಿರಮಿಡ್ ಆಕೃತಿಯ ಗುಮ್ಮಟ, 69 ಮೀಟರ್ ಎತ್ತರದ ಅವಳಿ ಗೋಪುರ ಸೇರಿದಂತೆ ಹಲವು ವಿಶೇಷಗಳಿಂದ ನೋಡುಗರ ಕಣ್ಮನ ಸೆಳೆಯುವ ನಾಟ್ರೆ ಡೇಮ್ ಚರ್ಚ್ ಆವರಣದಲ್ಲಿ ಮುಂದೆ ಸಾಗುತ್ತಿರಬೇಕಾದರೆ ಆಕೆಯ ಗಮನ ಸೆಳೆಯಿತು ಆ ದೃಶ್ಯ. ಅಪ್ಪ–ಮಗಳ ಜೋಡಿಯೊಂದು ತಮ್ಮದೇ ಲೋಕದಲ್ಲಿ ತಲ್ಲೀನವಾಗಿ ಆಟವಾಡುತ್ತಿರುವುದನ್ನು ನೋಡಿದ ಆಕೆಯೊಳಗಿನ ಛಾಯಾಗ್ರಾಹಕಿ ಜಾಗೃತವಾದಳು. ತಕ್ಷಣವೇ ಫೋಟೊ ಸೆರೆಹಿಡಿದಳು. ಈ ಫೋಟೊವನ್ನು ಅವರಿಗೆ ಕೊಟ್ಟು ಬಿಡಲೇ? ಆಕೆಯ ಮನದಲ್ಲಿ ಒಂದು ಕ್ಷಣ ಕಾಡಿದ ಪ್ರಶ್ನೆಯಿದು. ಆ ಅಪರಿಚಿತ ವ್ಯಕ್ತಿಯ ಬಳಿ ಹೋಗಿ 'ನಿಮಗೆ ಈ ಫೋಟೊ ಬೇಕೇ' ಎಂದು ಕೇಳಬೇಕು ಎಂದುಕೊಂಡಿದ್ದವಳು ಆ ಪ್ರಶ್ನೆಯನ್ನು ತನ್ನಲ್ಲೇ ಉಳಿಸಿ ಮುಂದೆ ಸಾಗಿದ್ದಳು. ಬಳಿಕ ಆ ಅಪ್ಪ–ಮಗಳು ಎಲ್ಲಿ ಹೋದರೋ, ತಿಳಿದವರಾರು...

ಇದಾಗಿ ಒಂದು ತಾಸು ಕಳೆದಿರಬಹುದು. ದೂರದಲ್ಲಿ ಭಾರಿ ಹೊಗೆಯಾಡುತ್ತಿರುವುದನ್ನು ಬ್ರೂಕ್ ವಿಂಡ್ಸರ್‌ಗೆ ಸ್ನೇಹಿತೆ ತೋರಿಸಿದ್ದಾಳೆ. ಚರ್ಚ್‌ನಲ್ಲಿ ಅಗ್ನಿ ಅನಾಹುತ ಸಂಭವಿಸಿರುವುದು ಗೊತ್ತಾಗಿದೆ. ಅನಾಹುತದ ಸುದ್ದಿ ವಿಶ್ವದಾದ್ಯಂತ ಕಾಳ್ಗಿಚ್ಚಿನಂತೆ ಹರಡಿದೆ. ಒಂದು ತಾಸು ಹಿಂದೆ ಅಲ್ಲಿದ್ದ ವಾತಾವರಣವೇ ಬೇರೆ. ಪ್ರವಾಸಿಗಳ ದಂಡು, ಅಪ್ಪ–ಮಗಳ ಆಟ, ಸ್ವಚ್ಛಂದವಾಗಿ ವಿಹರಿಸುತ್ತಿದ್ದ ಯುವ ಜೋಡಿಗಳಿಂದ ತುಂಬಿ ಕಳೆಗಟ್ಟಿದ್ದ ಚರ್ಚ್ ಆವರಣವು ಅಗ್ನಿಶಾಮಕ ವಾಹನಗಳ ಸೈರನ್, ಭೀತಿಯಿಂದ ಓಡಾಡುತ್ತಿರುವ ಜನರಿಂದ ತುಂಬಿತ್ತು. ನಂತರ ಬೆಂಕಿ ಆರಿಸಲಾಯಿತು, ಅದೃಷ್ಟವಶಾತ್ ಸಾವು–ನೋವು ಸಂಭವಿಸಲಿಲ್ಲ ಎಂಬುದು ಖುಷಿಯ ವಿಚಾರ.

## 'ಛೇ, ಆಗಲೇ ಕೊಟ್ಟುಬಿಡಬೇಕಿತ್ತು'

ಚರ್ಚ್ ಬೆಂಕಿ ಅನಾಹುತಕ್ಕೀಡಾದ ಬಳಿಕ ವಿಂಡ್ಸರ್‌ಗೆ ಅನಿಸಿದ್ದಿಷ್ಟು; 'ಇಂತಹದ್ದೊಂದು ಘಟನೆ ನಡೆಯುವುದಕ್ಕೂ ಮೊದಲು ಆ ಅಪ್ಪ–ಮಗಳ ಜಾಗದಲ್ಲಿ ನಾನಿದ್ದಿದ್ದರೆ, ನನ್ನ ಫೋಟೊ ಯಾರಾದರೂ ತೆಗೆದಿದ್ದರೆ ಖಂಡಿತಾ ನಾನದನ್ನು ಸಂಗ್ರಹಿಸಿಡಲು ಬಯಸುತ್ತಿದ್ದೆ. ಛೇ... ನಾನದನ್ನು ಆಗಲೇ ಅವರಿಗೆ ಕೊಡಬೇಕಿತ್ತು'. ಹೀಗನ್ನಿಸಿದ್ದೇ ತಡ. ಫೋಟೊವನ್ನು ಆ ವ್ಯಕ್ತಿಗೆ ಕೊಡಬೇಕೆಂದು ಆಶಿಸುತ್ತಾಳೆ. ಆದರೆ, ಕೊಡುವುದು ಹೇಗೆ? ತಕ್ಷಣ ಆಕೆಗೆ ನೆನಪಾದದ್ದು ಟ್ವಿಟರ್.

## 'ಟ್ವಿಟರ್, ಮ್ಯಾಜಿಕ್ ಮಾಡುವೆಯಾ?'

'ಚರ್ಚ್ ಬೆಂಕಿ ಅನಾಹುತಕ್ಕೀಡಾಗುವುದಕ್ಕೂ ಒಂದು ಗಂಟೆ ಮೊದಲು ನಾನು ಈ ಚಿತ್ರವನ್ನು ಸೆರೆಹಿಡಿದೆ. ಆ ವ್ಯಕ್ತಿಯ ಬಳಿ ಹೋಗಿ ಈ ಫೋಟೊ ನಿಮಗೆ ಬೇಕೇ ಎಂದು ಕೇಳಬೇಕು ಅನ್ನಿಸಿತ್ತು. ಈಗ ನಾನಿದನ್ನು ಅವರಿಗೆ ನೀಡಬಯಸಿದ್ದೇನೆ. ಟ್ವಿಟರ್, ನಿನ್ನಲ್ಲೇನಾದರೂ ಮ್ಯಾಜಿಕ್ ಇದ್ದರೆ ಅವರಿಗೆ ಈ ಫೋಟೊ ಸಿಗುವಂತೆ ಮಾಡು' ಎಂದು ಟ್ವೀಟ್ ಮಾಡಿದ್ದಾರೆ. ಈ ಟ್ವೀಟ್ ಈಗ ವೈರಲ್ ಆಗಿದೆ. 4 ಲಕ್ಷಕ್ಕೂ ಹೆಚ್ಚು ಜನ ಇದಕ್ಕೆ ಲೈಕ್ ಒತ್ತಿದ್ದಾರೆ. 66 ಸಾವಿರಕ್ಕೂ ಹೆಚ್ಚು ಜನ ಶೇರ್ ಮಾಡಿದ್ದಾರೆ. 2 ಲಕ್ಷಕ್ಕೂ ಹೆಚ್ಚು ಜನ ಪ್ರತಿಕ್ರಿಯಿಸಿದ್ದಾರೆ.

ಇಷ್ಟಾದರೂ ವಿಂಡ್ಸರ್ ಸೆರೆಹಿಡಿದ ಫೋಟೊ ಆ ಅಪರಿಚಿತ ವ್ಯಕ್ತಿಗೆ ತಲುಪಿತೋ ಇಲ್ಲವೋ? ಮುಂದೊಮ್ಮೆ ಆ ವ್ಯಕ್ತಿ 'ಫೋಟೊ ಸಿಕ್ಕಿತು' ಎಂದು ಟ್ವಿಟರ್‌ನಲ್ಲೇ ಉತ್ತರ ನೀಡಬಹುದೇ? ಕಾಲವೇ ಉತ್ತರಿಸಬೇಕು.

ಚಿತ್ರ ಸೌಜನ್ಯ: twitter.com/brookeawindsor